| | | |
|---|---|---|
| ಓ ಎಸ್ | 69/2017 | ಪಿ.ಡಬ್ಲ್ಯೂ 1 |

ಇಂದು ದಿಃ25/01/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಡಿ.ಬಿ.ಎಂ. ವಕೀಲರಿಂದಃ-

ನಾನು ಪುಟ್ಟೇಗೌಡ ಹಾಗೂ ಮಾದಮ್ಮ ರವರ ಮಗಳು ಎಂದು ತೋರಿಸಲು ವಂಶವೃಕ್ಷ ಹಾಜರುಪಡಿಸಿದ್ದೇನೆ. ಅದನ್ನು ನಾನೇ ಬರೆದು ಹಾಕಿರುವುದು ಹೊರತು ಯಾವುದೇ ಅಧಿಕಾರಿ ನೀಡಿದ್ದು ಅಲ್ಲ ಎಂದರೆ ನಿಜ. ನನ್ನ ತಂದೆ ತೀರಿಕೊಂಡು 15 ವರ್ಷವಾಯಿತು. ನನ್ನ ತಾಯಿ ತೀರಿಕೊಂಡು 10 ಅಥವಾ 12 ವರ್ಷವಾಯಿತು. ಒಂದನೇ ಪ್ರತಿವಾದಿಯು ಪುಟ್ಟೇಗೌಡ ಹಾಗೂ ಸಿದ್ದಮ್ಮ ದಂಪತಿಯ ಮಗಳು ಎಂದರೆ ನಿಜ. ದಾವಾ ಆಸ್ತಿ ನನ್ನ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. 2 ರಿಂದ 4 ನೇ ಪ್ರತಿವಾದಿಯರು ನನ್ನನ್ನು ಮಾತನಾಡಿಸುವುದಿಲ್ಲ ಹಾಗೂ ಯಾವುದಕ್ಕೂ ಕರೆಯುವುದಿಲ್ಲ. ಕಳೆದ 10 ವರ್ಷದಿಂದಲೂ ಅವರು ನನ್ನನ್ನು ಮಾತನಾಡಿಸುವುದಿಲ್ಲ ಹಾಗೂ ಯಾವುದಕ್ಕೂ ಕರೆಯುವುದಿಲ್ಲ. ನಾನೂ ಕೂಡ ಅವರನ್ನು ಮಾತನಾಡಿಸುತ್ತಿಲ್ಲ ಹಾಗೂ ಅವರ ಮನೆಗೆ ಹೋಗುತ್ತಿಲ್ಲ. ಅವರ ಬಳಿ ನಾನು ಹಿಸ್ಸೆ ಕೇಳಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಯ ಸ.ನಂ. ಗೊತ್ತಿಲ್ಲ. ಪ್ರತಿವಾದಿಯರು ಮಾರಾಟ ಮಾಡಿದ್ದು ಗೊತ್ತಾಗಿರುವುದರಿಂದ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ. 1 ನೇ ಪ್ರತಿವಾದಿ ಹಾಗೂ ನಾನು ಪರಸ್ಪರ ಚೆನ್ನಾಗಿ ಇದ್ದೇವೆ. ಈ ದಾವೆ ದಾಖಲಿಸಲು 1 ನೇ ಪ್ರತಿವಾದಿಯು ನನಗೆ ಹೇಳಿಲ್ಲ. ಆಕೆಗೆ ಆಸ್ತಿ ಯಾವ ರೀತಿ ಬಂತು ಎಂದು ಹೇಳಲು ಗೊತ್ತಿಲ್ಲ. 3 ಮತ್ತ 4 ನೇ ಪ್ರತಿವಾದಿಯರು 1 ನೇ ಪ್ರತಿವಾದಿಗೆ ದಿನಂಾಕ 15/03/2012 ರಂದು ದಾನ ಪತ್ರ ಬರೆದುಕೊಟ್ಟರು ಎಂದರೆ ಗೊತ್ತಿಲ್ಲ. ಆ ಮೇರೆಗೆ 1 ನೇ ಪ್ರತಿವಾದಿ ಸ್ವಂತ ಸ್ವಾಧೀನತೆ

ಯಿಂದ ಇದ್ದರು ಎಂದರೆ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತೇನೆ. ಅದು ಆಕೆಯ ಸ್ವಯರ್ಜಿತ ಆಸ್ತಿ ಎಂದರೆ ಸರಿಯಲ್ಲ. ಆ ಮೇರೆಗೆ ಆಕೆ 31/05/2014 ರಂದು 5 ನೇ ಪ್ರತಿವಾದಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಸ್ವತ್ತು ಮಾರಾಟ ಮಾಡಿದ್ದುಎಂದರೆ ಸರಿಯಲ್ಲ. ಆವತ್ತಿನ ಮಾರುಕಟ್ಟೆ ಮೌಲ್ಯ ಪಾವತಿಸಿ 5 ನೇ ಪ್ರತಿವಾದಿ 1 ನೇ ಪ್ರತಿವಾದಿಯಿಂದ ದಾವಾ ಐಟಂ 1 ನ್ನು ಖರೀದಿ ಮಾಡಿರುವುದು ಎಂದರೆ ಸರಿಯಲ್ಲ. ನನಗೆ ಭಾಗ ಇರುವಂತೆ ಕೆಂಪಮ್ಮಳಿಗೂ ದಾವಾ ಆಸ್ತಿಯಲ್ಲಿ ಭಾಗ ಇದೆ ಎಂದು ಹೇಳುತ್ತೇನೆಯೇ ಎಂದರೆ ಹೌದು ಎಂದು ನುಡಿಯುತ್ತೇನೆ. ದಾವಾ ಐಟಂ 1 ಅನ್ನು ಬಿಟ್ಟು 2 ರಿಂದ 6 ದಾವಾ ಆಸ್ತಿಗಳು ಸುಮಾರು 12 ರಿಂದ 13 ಎಕರೆ ಇವೆ ಎಂದರೆ ಇನ್ನೂ ಜಾಸ್ತಿ ಇವೆ ಎಂದು ನುಡಿಯುತ್ತೇನೆ. ಸದರಿ ಸ್ವತ್ತುಗಳಲ್ಲಿ ನನ್ನ ಹಿಸ್ಸೆಯನ್ನು ನಾನು ಪಡೆದುಕೊಳ್ಳಬಹುದು ಹಾಗೂ ನನ್ನ ಹಕ್ಕಿಗೆ ಯಾವುದೇ ತೊಂದರೆಯಾಗುವುದಿಲ್ಲ ಎಂದರೆ ಸರಿಯಲ್ಲ. ಕೆಂಪಮ್ಮಳಿಗೆ 3 ಎಕರೆ 5 ಗುಂಟೆಯನ್ನು ಕೊಟ್ಟಿರುವುದು ಎಂದರೆ ನಿಜ. ನಾನು 1/5 ನೇ ಅಂಶ ಕೇಳಿರುವುದು ಎಂದರೆ ನಿಜ. ದಾವಾ ಉಳಿಕೆ ಐಟಂ ಸ್ವತ್ತುಗಳಲ್ಲಿಯೇ ನನಗೆ 3 ಎಕರೆ ಸಿಗುತ್ತೆ ಎಂದರೆ ನಿಜ. 5 ನೇ ಪ್ರತಿವಾದಿ ಖರೀದಿ ಮೇರೆಗೆ ಖಾತೆ ಬದಲಾವಣೆ ಮಾಡಿಕೊಂಡು ಉಳುಮೆ ಮಾಡುತ್ತಿದ್ದಾರೆ ಎಂದರೆ ನಿಜ. ನನ್ನ ಊರು ನಂಜನಗೂಡು ತಾಲ್ಲೂಕಿನಲ್ಲಿ ಇರುವುದು ಎಂದರೆ ನಿಜ. 5 ನೇ ಪ್ರತಿವಾದಿ ನಂಜನಗೂಡಿನ ಚೆನ್ನಪಟ್ಟಣ ಊರಿನವರು. ನನ್ನ ಊರಿನಿಂದ ಅವರ ಊರಿಗೆ 2 ಕಿ ಮೀ ದೂರವಿದೆ. ಆಕೆ ನನ್ನ ಪರಿಚಯಸ್ಥಳು ಎಂದರೆ ಸರಿಯಲ್ಲ. ಆಕೆ ಬಳಿ ಹೋಗಿ ಆಸ್ತಿ ಖರೀದಿ ಮಾಡಬೇಡಿ ಎಂದು ಹಾಗೂ ನನಗೂ ಹಕ್ಕು ಇದೆ ಎಂದು ನಾನು ಹೇಳಿದ್ದೇನೆಯೇ ಎಂದರೆ ಖರೀದಿ ಆಗುವವರೆಗೂ ಗೊತ್ತಿರಲಿಲ್ಲ ಎಂದು ನುಡಿಯುತ್ತೇನೆ. ಖರೀದಿ ಆದ ನಂತರ ಇದುವರೆಗೂ 5 ನೇ ಪ್ರತಿವಾದಿ ಬಳಿ ನಾನು ಹೋಗಿಲ್ಲ ಹಾಗೂ ಹಿಸ್ಸೆ ಕೇಳಿಲ್ಲ. 5 ನೇ ಪ್ರತಿವಾದಿಯ ಕ್ರಯ ಪತ್ರಕ್ಕೆ ಯಾರೆಲ್ಲಾ ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ. ದಾವಾ ಐಟಂ 1 ರಲ್ಲಿ ನನಗೆ ಯಾವುದೇ ಹಿಸೆ ಬರಬೇಕಾಗಿಲ್ಲ ಎಂದರೆ ಸರಿಯಲ್ಲ. 5 ನೇ

ಪ್ರತಿವಾದಿ ವಿರುದ್ಧ ಸುಳ್ಳು ದಾವೆ ದಾಖಲಿಸಿರುವುದು ಎಂದರೆ ಸರಿಯಲ್ಲ. ನನ್ನ ಸಹೋದರರಿಗೆ ಪಿತ್ರಾರ್ಜಿತವಾಗಿ ಬಂದ ಮನೆ ಹಾಗೂ ನಿವೇಶನಗಳು ಇವೆ. ಸೂಕ್ತ ದಾವಾ ಶುಲ್ಕ ಪಾವತಿಸಿಲ್ಲ ಎಂದರೆ ಸರಿಯಲ್ಲ. ಅವಶ್ಯಕ ಪಕ್ಷಗಾರರನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಕೆಲವೇ ಆಸ್ತಿಗಳನ್ನು ಸೇರಿಸಿ ದಾವೆ ಸಲ್ಲಿಸಿರುವುದು ಎಂದರೆ ಸರಿಯಲ್ಲ. ಆದ್ದರಿಂದ 5 ನೇ ಪ್ರತಿವಾದಿಗೆ ಕ್ರಯವಾದ ಆಸ್ತಿಯಲ್ಲಿ ನನಗೆ ಯಾವುದೇ ಹಿಸೆ ಬರಬೇಕಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿರುವುದು ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.